ಓ.ಎಸ್.4/2019 ಪಿ.ಡಬ್ಲ್ಯೂ 2

ದಿನಾಂಕಃ 22.06.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

## ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ     ಅವರಿಂದ

**1.** ನಾನು ಭರತವಾಡಿ ಗ್ರಾಮದಲ್ಲಿ ವಾಸವಾಗಿದ್ದೇನೆ. ವಾದಿ ಆಶಾ ಗೊತ್ತು. ವಾದಿ ಸಾಲಿಗ್ರಾಮದವರು. ವಾದಿ ಅವರು ಶಿವಣ್ಣ ಅವರ ಮೇಲೆ ಮಾತ್ರ ದಾವೆ ಹೂಡಿರುತ್ತಾರೆ ಪ್ರತಿವಾದಿ ಭರತವಾಡಿ ಗ್ರಾಮದಲ್ಲಿ ವಾಸವಾಗಿದ್ದಾರೆ. ಪ್ರತಿವಾದಿ ಹಾಲಿ ಮೈಸೂರಿನಲ್ಲಿ ವಾಸವಾಗಿದ್ದಾರೆ.

**2.** ನನ್ನ ಸಾಕ್ಷಿ ಪ್ರಮಾಣ ಪತ್ರದ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ . ಸಾಮಾನ್ಯವಾಗಿ ಸಾಲದ ವ್ಯವಹಾರಗಳನ್ನು ಮಾಡುವಾಗ ಗುರುತು ಪರಿಚಯ ಇರುವ ಜನರೊಂದಿಗೆ ಮಾಡುತ್ತಾರೆ ಎಂದರೆ ಸರಿ. ದಿಃ **07.12.2012** ರಂದು ವಾದಿ ಆಶಾ ಪ್ರತಿವಾದಿ ಶಿವಣ್ಣ ಇವರಿಗೆ **3,00,000/-** ಹಣ ಸಾಲ ನೀಡಿರುತ್ತಾರೆ. ವಾದಿ ತಾಲೂಕು ಕಛೇರಿಯಲ್ಲಿ ಪ್ರತಿವಾದಿಗೆ ಸಾಲ ನೀಡಿರುತ್ತಾರೆ. ಅದಕ್ಕೆ ವಾದಿ ಪ್ರತಿವಾದಿ ಕಡೆಯಿಂದ ಕ್ರಯದ ಕರಾರು ಪತ್ರ ಬರೆಸಿಕೊಂಡು ನಮ್ಮ ಸಹಿ ಪಡೆದಿರುತ್ತಾರೆ ಸದರಿ ಕರಾರು ಪತ್ರದ ಛಾಪ ಕಾಗದವನ್ನು ವಾದಿ ತಂದಿದ್ದರು . ಸಾಕ್ಷಿ ಮುಂದುವರಿದು ಛಾಪ ಕಾಗದವನ್ನು ಪ್ರತಿವಾದಿ ಶಿವಣ್ಣ ತಂದಿದ್ದರು ಎಂದು ನುಡಿಯುತ್ತಾರೆ.

**3.** ಪ್ರತಿವಾದಿ ಶಿವಣ್ಣ ಛಾಪ ಕಾಗದದಲ್ಲಿ ಬರವಣಿಗೆ ಮಾಡಿಕೊಂಡು ಬಂದಿದ್ದರು ಅದನ್ನು ಓದಿ ಹೇಳಿದ ನಂತರ ವಾದಿಯಿಂದ ಪ್ರತಿವಾದದಿ **3,00,000/-** ಹಣ ಪಡೆದಿರುತ್ತಾರೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಸದರಿ ಛಾಪ ಕಾಗದ **500/-** ರೂ. ಬೆಲೆಯದ್ದಾಗಿತ್ತು. ಒಂದೊಂದು ಛಾಪ ಕಾಗದ ಎಷ್ಟು ಹಣದ್ದಾಗಿರುತ್ತದೆ ಎಂದರೆ ಗೊತ್ತಿಲ್ಲ. ಈ ಹಂತರದಲ್ಲಿ ಸಾಕ್ಷಿದಾರರಿಗೆ ನಿಪಿ.**3** ತೋರಿಸಿ ಸದರಿ

ಛಾಪ ಕಾಗದ ಬೆಲೆ ಎಷ್ಟು ಎಂದು ಕೇಳಿದಾಗ ಸಾಕ್ಷಿ ನನಗೆ ಓದಲು ಬರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

**4.** ನಾನು ರುಜು ಮಾಡುತ್ತೇನೆ. ನಾನು ವಿದ್ಯಾಭ್ಯಾಸ ಮಾಡಿಲ್ಲ. ನಿಪಿ.**3** ಕ್ಕೆ ಒಟ್ಟು **5** ಜನ ರುಜು ಮಾಡಿರುತ್ತಾರೆ. ನಿಪಿ.**3** ರ ಒಕ್ಕಣಿಕೆಯನ್ನು ಜಗದೀಶ್ ಅವರು ಬರೆದಿರುತ್ತಾರೆ. ನಿಪಿ.**3** ಅನ್ನು ಗಣಕೀಕೃತ ಮಾಡಲಾಗಿರುತ್ತದೆ ಎಂದರೆ ಮೊದಲು ಅದನ್ನು ಕೈಬರಹದಲ್ಲಿ ಬರೆದು ನಂತರ ಅದನ್ನು ಗಣಕೀಕೃತ ಮಾಡಲಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಕೈಬರವಣಿಗೆಯಲ್ಲಿರುವ ಪತ್ರವನ್ನು ಪ್ರತಿವಾದಿಯರೆ ಇಟ್ಟುಕೊಂಡಿರುತ್ತಾರೆ.

**5.** ನಿಪಿ.**3** ಕ್ಕೆ ಸಾಕ್ಷಿದಾರರಾಗಿ ನಾನು ಹಾಗೂ ವೆಂಕಟೇಶ್ ಅವರು ಸಹಿ ಮಾಡಿರುತ್ತೇವೆ. ಪತ್ರಬರಹಗಾರರು ನಿಪಿ**3** ಅನ್ನು ಬರೆದ ನಂತರ ಅದನ್ನು ಎಲ್ಲರಿಗೂ ಓದಿ ಹೇಳಿರುತ್ತಾರೆ. ನಿಪಿ.**3** ಅನ್ನು ಓದಿ ಹೇಳಲಾಯಿತು ಎಂದು ನಿಪಿ.**3** ರಲ್ಲಿ ನಮೂದಾಗಿದೆಯಾ ಎಂಬ ಪ್ರಶ್ನೆಗೆ ಅದರಲ್ಲಿ ನಮೂದು ಮಾಡಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ.

**6.** ನನ್ನ ಹೆಸರು-ವಿಳಾಸ ಹಾಗೂ ವೆಂಕಟೇಶ ಅವರ ಹೆಸರು-ವಿಳಾಸವನ್ನು ನಿಪಿ.**3** ರಲ್ಲಿ ಜಗದೀಶ್ ಅವರೆ ಬರೆದಿರುತ್ತಾರೆ. ನಾನು ಸಾಮಾನ್ಯವಾಗಿ ಪ್ರತಿದಿನ ಉಪನೊಂದಣಾಧಿಕಾರಿ ಕಛೇರಿಯಲ್ಲಿಯೆ ಇರುತ್ತೇನೆ ಎಂದರೆ ಸರಿಯಲ್ಲ. ಉಪನೊಂದಣಾಧಿಕಾರಿ ಕಛೇರಿಯಲ್ಲಿ ನಿಪಿ.**3** ಕ್ಕೆ ಮೊದಲು ನಾನು ಸಾಕ್ಷಿದಾರನಾಗಿ , ಆಮೇಲೆ ವೆಂಕಟೇಶ ಸಹಿ ಮಾಡಿರುತ್ತಾರೆ.

**7.** ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಿಪಿ3 ರ ರಿಜಿಸ್ಟ್ರೇಷನ್ ನಂಬರ್ ನಮೂದು ಮಾಡಿರುತ್ತೇನೆ ಎಂದರೆ ಸರಿ. ಪ್ರತಿವಾದಿ ಶಿವಣ್ಣ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿರಲಿಲ್ಲ, ಅವರು ವಾದಿಯಿಂದ ಕೇವಲ ಸಾಲ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

8. ನನಗೆ ಭಾರತ್ ವಾಡಿಯಲ್ಲಿ ನನ್ನ ತಂದೆ ಹೆಸರಿನಲ್ಲಿರುವ ಜಮೀನು ಇದೆ. ನಮ್ಮ ಊರಿನಲ್ಲಿ 1 ಗುಂಟೆ ಜಮೀನು 1 ರಿಂದ 2 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. 1 ಎಕರೆಗೆ 4 ಲಕ್ಷ ಬೆಲೆ ಬಾಳುತ್ತದೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.

9. ವಾದಿ ಆಶಾ ಅವರ ಗಂಡನ ಹೆಸರು ರಾಜು ಎಂದರೆ ಸರಿ. ಸದರಿ ರಾಜು ಅವರು ವಾದಿಯ ಜಿಪಿಎ ಪಡೆದು ಸಾಕ್ಷಿ ವಿಚಾರಣೆ ಆಗಿರುತ್ತದೆ ಎಂದರೆ ಸರಿ. ವಾದಿ ಮನೆಯ ಹಣಕಾಸು ವ್ಯವಹಾರವನ್ನು ಅವರ ಗಂಡ ರಾಜು ಅವರೆ ಮಾಡುತ್ತಾರೆ ಎಂದರೆ ಸರಿ. ಪ್ರತಿವಾದಿ ಶಿವಣ್ಣ ಅವರು ರಾಜು ಅವರನ್ನು ಪುನಃ 2,00,000/- ಹಣ ಬೇಕು ಎಂದು ಕೇಳಿದ್ದರು ಎಂದರೆ ಸರಿಯಲ್ಲ. ಆಶಾ ಅವರನ್ನು ಕೇಳಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

10. ದಿಃ 15.07.2013 ರಲ್ಲಿ ಪ್ರತಿವಾದಿಯರು 2,00,000/- ಸಾಲ ಬೇಕು ಎಂದು ರಾಜು ಅವರನ್ನು ಕೇಳಿದ್ದರು ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ದಿಃ **15.07.2013** ರ ಕ್ರಯ ಒಪ್ಪಂದದ ಪತ್ರದ ಜೆರಾಕ್ಸ್ ಪ್ರತಿಯನ್ನು ಕನ್ ಫ್ರಂಟ್ ಮಾಡಲು ನ್ಯಾಯಾಲಯದ ಅನುಮತಿ ಕೋರಿದ್ದು, ಸದರಿ ದಾಖಲಾತಿ ಜೆರಾಕ್ಸ್ ಪ್ರತಿಯಾದ್ದರಿಂದ ನ್ಯಾಯಾಲಯ ಅನುಮತಿ ನೀಡಿರುವುದಿಲ್ಲ. ಆದ್ದರಿಂದ ಪ್ರತಿವಾದಿ ಪರ ವಕೀಲರು ಸೂಕ್ತ ಅರ್ಜಿ ಸಲ್ಲಿಸಿ ಸದರಿ ದಾಖಲಾತಿಯನ್ನು ಹಾಜರುಪಡಿಸಲು ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.